ಮುಖಕೊಟ್ಟು ಮಾತಾಡದ ದೂರ್ವಾಸನಾಗಿದ್ದ ಆತ, ಮೀನುಖರೀದಿಗೆ ಹೋದಾಗ, ನೆರೆಮನಿಗಳಾದ ನಮ್ಮನ್ನು ಅಪರಿಚಿತರಂತೆ ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುತ್ತಿದ್ದ. ಕುಡಿಯಲು ಜಗುಲಿಯಲ್ಲಿ ಕೂತಾಗ ಮಾತ್ರ, ಬದಲಾಗಿ ನಂಚಿಕೊಳ್ಳಲು ಇಟ್ಟುಕೊಂಡಿದ್ದ ಪಕೋಡ, ಕಾರಗಳನ್ನು ಕರೆಕರೆದು ಹಂಚುತ್ತಿದ್ದ. ಬೀದಿಯ ನಾಯಿ–ಬೆಕ್ಕುಗಳ ಜತೆಗೂ ಗಂಟೆಗಟ್ಟಲೆ ಸಂಭಾಷಿಸುತ್ತಿದ್ದ. ಪಾನಕ್ಕೆ ಸರ್ವಜೀವಗಳನ್ನು ಭೇದವಿಲ್ಲದೆ ನೋಡುವ ಸಮದರ್ಶನ ಒದಗಿಸುವ ಸದ್ಗುಣವಿರುವುದನ್ನು ಇಂತಹ ಉದಾಹರಣೆಗಳ ಮೂಲಕ ಮನಗಾಣಬಹುದು.

ಇದಕ್ಕೆ ವ್ಯತಿರಿಕ್ತ ಪ್ರಸಂಗಗಳೂ ಇವೆ. ಇವೆಯೇನು, ಸ್ವತಃ ನಾನೇ ಅನುಭವಿಸಿರುವೆ. ಅದೊಂದು ವಯಸ್ಕ ಜೋಡಿಗಳೇ ಉತ್ತರ ಭಾರತಕ್ಕೆ ಹೊರಟಿದ್ದ ಯಾತ್ರಾತಂಡ. ಒಂದು ಜೋಡಿ ಕೊನೇಕ್ಷಣದಲ್ಲಿ ಕೈಕೊಟ್ಟ ಕಾರಣ, ವ್ಯವಸ್ಥಾಪಕರು ನನ್ನನ್ನೂ ಒಬ್ಬ ನಿವೃತ್ತ ಅಧಿಕಾರಿಯನ್ನೂ ಸೇರಿಸಿಕೊಂಡಿದ್ದರು. ನಮ್ಮಿಬ್ಬರಿಗೆ ರಾತ್ರಿವಸ್ತಿಗೆ ಒಂದೇ ಕೋಣೆಯಲ್ಲೇ ಇಳಿಸಲಾಗುತ್ತಿತ್ತು. ನನ್ನನ್ನು ಲೇಖಕನೆಂದು ಅರಿತ ಅಧಿಕಾರಿ, ದಿನವಿಡೀ ವಿನಯದಿಂದ ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ನನ್ನ ಬ್ಯಾಗನ್ನು ತಾವೇ ಎತ್ತುತ್ತಿದ್ದರು. ರಾತ್ರಿಯಾಯಿತೊ, ಒಂದು ಪೆಗ್ಗು ಒಳಹೋಯಿತೊ, ನಾಟಕೀಯವಾಗಿ ಏಕವಚನಕ್ಕಿಳಿಯುತ್ತಿದ್ದರು. 'ಏ ಆ ಲೋಟ ತಗೊ, ಬಾತ್‌ರೂಮ್ ಡೋರ್ ಮುಚ್ಚು, ಈ ಲೈಟ್ ಆಫ್‌ಮಾಡು, ಸೌತೆಕಾಯಿ ಹೆಚ್ಚು, ಕಡಲೆಬೀಜದ ಪ್ಯಾಕೇಟು ಬಿಚ್ಚು, ಚೆಲ್ತಿದಿಯಲ್ಲ, ರೈಟರಾಗಿ ಅಷ್ಟು ಬುದ್ಧಿ ಬ್ಯಾಡವಾ?' ಎಂದು ಹುಕುಂ ಚಲಾಯಿಸುತ್ತಿದ್ದರು. ನನ್ನನ್ನವರು ಜೀತಕ್ಕಿಳಿಸಲು ಒಂದು ಕಾರಣ, ಚಳಿಯ ತಾಣದಲ್ಲಿ ಅವರ ಪಾಲಿನ ವಿಸ್ಕಿಗೆ ಹಂಗಿನ ಬಟ್ಟಲೊಡ್ಡುತ್ತಿದ್ದುದು. ಊರಲ್ಲಿದ್ದಾಗ ಮಡದಿಗಂಜಿ ಸಾತ್ವಿಕರಾಗುತ್ತಿದ್ದ ಶ್ರೀಯುತರು ಪ್ರವಾಸದಲ್ಲಿ ತಾಮಸಾವತಾರ ಎತ್ತುತ್ತಿದ್ದರು. ಅವರ ಸೂಟುಕೇಸಲ್ಲಿ ಎರಡು ಜತೆ ಬಟ್ಟೆಯಿದ್ದವು. ಉಳಿದಂತೆ ಮಿಶಿನ್‌ಗನ್ನಿನ ಕಾಡತೂಸು ಸರದಂತಿರುವ ಚಿಕ್ಕಗಾತ್ರದ ವಿಸ್ಕಿಬಾಟಲಿ ತುಂಬಿದ್ದವು. ನಾನು, 'ಅಲ್ಲಾ ಸಾರ್, ತೀರ್ಥಯಾತ್ರೆಗೆ ಅಂತ ಬಂದು...' ಎಂದು ಕಾಲೆಳೆದರೆ, 'ಹೊರಗಡೆ ಬಂದಾಗ ಫ್ರೀಯಾಗಿ ಕುಡೀದೇ ಏನು ಮನೇಲಿ ಕುಡಿಯೋಕಾಗುತ್ತಾ? ಹುಚ್ಚ, ಸುಮ್ಮನೆ ತಗೊ' ಎಂದು ಬಾಯಿ ಬಡಿಯುತ್ತಿದ್ದರು. ಪಾನಲೋಕದಲ್ಲಿ ಹಂಚಿಕೊಳ್ಳುವ ಉದಾರತೆ ಬೇಕಾದಂತಿದೆ. ಆದರೆ ದಿನವೂ ಚಿಪ್ಪು ಹಿಡಿಯುವರಿಗೆ ಕಿಮ್ಮತ್ತಿಲ್ಲ. ಕಾಮಾತುರರಿಗೆ ಭಯ ಲಜ್ಜೆ ಇಲ್ಲವಂತೆ. ಪಾನಾತುರರೂ ಇದೇ ಕುಲದವರು. ಶಿವಮೊಗ್ಗೆಯಲ್ಲಿ ನಾನೇ ಕಂಡಂತೆ ಉದಾರಮನಸ್ಸಿನ ಸಿರಿವಂತರಾದ ಗಣ್ಯವ್ಯಕ್ತಿಯಿದ್ದರು. ಅವರಿಗೆ ಕವಿಗೋಷ್ಠಿ, ಸಂಗೀತಕಛೇರಿ, ನಾಟಕ ಪ್ರದರ್ಶನ ಏರ್ಪಡಿಸುವ, ಸಾಹಿತಿಗಳ ಜತೆ ಚರ್ಚಿಸುವ ಅಭ್ಯಾಸವಿತ್ತು. ಅವರು ಕಲಾವಿದರಿಗೆ ಆಗಾಗ್ಗೆ ತಮ್ಮ ಮಹಾಮನೆಯಲ್ಲಿ ಮೇಜುವಾನಿ ಏರ್ಪಡಿಸುತ್ತಿದ್ದರು. ಒಮ್ಮೆ ಅವರಿಗೆ ತಾವು ಗೌರವಿಸುತ್ತಿದ್ದ ಕವಿಯೊಬ್ಬರು ಮಂದಬೆಳಕಿನಲ್ಲಿ ಸೀಸೆಯನ್ನು ಬ್ಯಾಗಿನೊಳಗೆ ಇಳಿಬಿಡುತ್ತಿರುವ ದೃಶ್ಯವನ್ನು ನೋಡುವ ದುರ್ಗತಿ ಬಂದಿತು. ಪಾಪ ಅನಿಸಿತು. ಸದರಿ ಕವಿ ಹೊರಡುವಾಗ ಸಮೀಪಕ್ಕೆ ಕರೆದು, ತುಂಬಿದ ಇನ್ನೊಂದು ಸೀಸೆಯನ್ನು ಬ್ಯಾಗಿನೊಳಗಿಟ್ಟು, ಕೆಟ್ಟಕಾವ್ಯ ರಚಿಸಿದರೂ ಪರವಾಗಿಲ್ಲ, ಕವಿಯ ಘನತೆ ಕೆಡಬಾರದು ಎಂದು ಹಿತವಚನ ಹೇಳಿ ಕಳಿಸಿದರು.

ನಾಟಕ–ಸಿನಿಮಾ ಕಲಾವಿದರ ಲೋಕದಲ್ಲಿ ಪಾನವು ಪ್ರವಾಹವಾಗಿ ಹರಿದಿದೆಯಷ್ಟೆ. ಸೃಷ್ಟಿಕ್ರಿಯೆಗೆ ಬೇಕಾದ ಕಲ್ಪನೆಯನ್ನು ಪ್ರಚೋದಿಸುವ ಯಾವ ಶಕ್ತಿ ಪಾನಕ್ಕಿದೆಯೊ ಏನೊ? ಕಲೆಯ ಸೃಷ್ಟಿಗೆ ಸೀಮೋಲ್ಲಂಘನೆ ಪರಕಾಯ ಪ್ರವೇಶ ಮಾಡಬೇಕಾದ ಕಲಾವಿದರಿಗೆ